# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಹೊರಗುತ್ತಿಗೆ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳಿಗೆ ಸಂಭಾವನೆಗಾಗಿ 2021-22ನೇ ಸಾಲಿನ ಪೂರಕ ಅಂದಾಜು-2ರ ಬೇಡಿಕೆ ಸಂಖ್ಯೆ 18ರಡಿ ಲೆಕ್ಕ ಶೀರ್ಷಿಕೆ 2851-00-196-2-01ರಡಿ ಒದಗಿಸಿರುವ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಆರ್ಥಿಕ ಇಲಾಖೆ ವೆಚ್ಚ 1 ಶಾಖೆಯ ಕಡತ ಸಂಖ್ಯೆ: ಆಇ 244 ವೆಚ್ಚ 1/2021 ಇ

**ಪ್ರಸ್ತಾವನೆ:**

ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ತೆರವಾದ ಹುದ್ದೆಗೆಉದರಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಸಂಭಾವನೆಗಾಗಿ 2021-22ನೇ ಸಾಲಿನ ಪೂರಕ ಅಂದಾಜು-2ರ ಬೇಡಿಕೆ ಸಂಖ್ಯೆ 18ರಡಿ ಲೆಕ್ಕ ಶೀರ್ಷಿಕೆ 2851-00-196-2-01ರಡಿ ಒಟ್ಟು ರೂ.21.11ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಿದ್ದು, ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2851-00-107-0-29-034ರಡಿ ಸಂಬಂಧ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸುವಂತೆ ಮೇಲೆ ಓದಲಾದ ಕಡತದಲ್ಲಿ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮದಡಿ ರೂ182.62ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2851-00-196-2-01ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 118 ವೆಚ್ಚ 6/2022(ಇ) ದಿನಾಂಕ: 16ನೇ ಫೆಬ್ರವರಿ 2022

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಕೋಡ್‌ನ ಕಾಲಂ 3ರ ಜಿಲ್ಲಾ ಪಂಚಾಯತಿಗಳಿಗೆ ಕಾಲಂ 4 ಕಾರ್ಯಕ್ರಮದಡಿ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ತೆರವಾದ ಹುದ್ದೆಗೆಉದರಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಸಂಭಾವನೆಗಾಗಿ ಕಾಲಂ 5ರ ಲೆಕ್ಕ ಶೀರ್ಷಿಕೆಯಡಿ ರೂ.21.11ಲಕ್ಷ (ರೂಪಾಯಿ ಇಪ್ಪತ್ತೊಂದು ಲಕ್ಷದ ಹನ್ನೊಂದು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ.

ಬಿಡುಗಡೆಗೊಳಿಸಿದ ಈ ಅನುದಾನವನ್ನು ಪ್ರಸ್ತಾವಿತ ವೆಚ್ಚವನ್ನು ಆದ್ಯತೆಯ ಮೇಲೆ ವೆಚ್ಚ ಮಾಡತಕ್ಕದ್ದು. ಯಾವುದೇ ಹಂತದಲ್ಲಿ ಅಂದರೆ ಮುಖ್ಯ ಲೆಕ್ಕಾಧಿಕಾರಿಗಳು/ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು. **ಪ್ರಸ್ತಾವಿತ ಲೆಕ್ಕ ಶೀರ್ಷಿಕೆಯಡಿ ಬಾಕಿ ಉಪದಾನವನ್ನು ಸೆಳೆಯಲು ಅದಕ್ಕೆ ಆರ್ಥಿಕ ಇಲಾಖೆ ಹೊರಡಿಸಿರುವ ಸುತ್ತೋಲೆಯ ಷರತನ್ನು ಪಾಲಿಸಿ ಬಾಕಿ ಸಂಭಾವನೆಯನ್ನು ಸೆಳೆಯಲು ಸಹಮತಿಸಿದೆ ಎಂದು ಭಾವಿಸತಕ್ಕದ್ದು.**

| ಕ್ರ.ಸಂ. | ಜಿಲ್ಲಾ ಕೋಡ್ | ಜಿಲ್ಲಾ ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2851-00-196-2-01 ರಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | 401 | ಬೆಂಗಳೂರು ನಗರ | 2851-00-107-0-29-034 | 2.51 |
| 2 | 404 | ಕೋಲಾರ | 2851-00-107-0-29-034 | 2.51 |
| 3 | 407 | ಮೈಸೂರು | 2851-00-107-0-29-034 | 2.51 |
| 4 | 410 | ಹಾಸನ | 2851-00-107-0-29-034 | 1.46 |
| 5 | 411 | ಕೊಡಗು | 2851-00-107-0-29-034 | 2.51 |
| 6 | 412 | ಮಂಡ್ಯ | 2851-00-107-0-29-034 | 2.51 |
| 7 | 413 | ಬೆಳಗಾವಿ | 2851-00-107-0-29-034 | 1.46 |
| 8 | 420 | ರಾಯಚೂರು | 2851-00-107-0-29-034 | 1.88 |
| 9 | 452 | ರಾಮನಗರ | 2851-00-107-0-29-034 | 2.30 |
| 10 | 462 | ಗದಗ್ | 2851-00-107-0-29-034 | 1.46 |
| | | **ಒಟ್ಟು** | | **21.11** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
4. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
7. ರಕ್ಷಾ ಕಡತಕ್ಕೆ 8. ಹೆಚ್ಚುವರಿ ಪ್ರತಿ